ದಿನಾಂಕ 18-02-2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ</u>**

ನಾನು ಬಿ.ಎ,. ಬಿ.ಎಡ್ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ವಾದ ಪತ್ರಕ್ಕೆ ಮತ್ತು ಸಾಕ್ಷಿ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ದಾವಾ ಆಸ್ತಿಯ ಮೂಲ ವಿಸ್ತೀರ್ಣ 4 ಗುಂಟೆ 3 ಅಣೆ ಇತ್ತು ಎಂದರೆ ಸರಿ. ದಾವಾ ಆಸ್ತಿಗೆ ಹೊಂದಿಕೊಂಡು ದಕ್ಷಿಣ ಭಾಗಕ್ಕೆ 4 ಮಹಡಿಯ ಕಟ್ಟಡ ಮತ್ತು ಹೊಂದಿಕೊಂಡು ಪಡಜಂತಿ  ಮನೆಗಳು ಇವೆ ಎಂದರೆ ಸಾಕ್ಷಿಯು ಮನೆಗಳು ಇದ್ದು ಹೊಂದಿಕೊಂಡು ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಪಡಜಂತಿ ಮನೆಗಳಲ್ಲಿ ಪ್ರತಿವಾದಿಗಳು ವಾಸ ಇರುತ್ತಾರೆ ಎಂದರೆ ಸರಿ. ಪ್ರತಿವಾದಿಗಳ ತಂದೆ ಒಟ್ಟು 3 ಜನ ಸಹೋದರರು ಎಂದರೆ ಸರಿ. ಅವರುಗಳ ಸಹೋದರರ ಹೆಸರು ಮಹಮ್ಮದ ಶರೀಪ ಮತ್ತು ರಫಿಕ್ ಎಂದರೆ ಸರಿ. ಸದರಿಯವರ ನಡುವೆ ಪಾಲು ವಾಟ್ನಿಯಾಗಿರುತ್ತದೆ ಎಂದರೆ ಸರಿ. ಸದರಿ ಪಾಲು ವಾಟ್ನಿ ಪತ್ರವನ್ನು ನ್ಯಾಯಲಯಕ್ಕೆ ಹಾಜರು ಪಡೆಸಿರುವುದಿಲ್ಲ ಎಂದರೆ ಸರಿಯಲ್ಲ.

**2.** ಸದರಿ ಪಾಲು ವಾಟ್ನಿಯ ಕುರಿತು ನನಗೆ ಮಾಹಿತಿ ಇದ್ದರು ಸಹ ಉದ್ದೇಶ ಪೂರ್ವಕವಾಗಿ ಹಾಜರು ಪಡೆಸಿರುವುದಿಲ್ಲ ಎಂದರೆ ಸಾಕ್ಷಿಯು ಹಾಜರು ಪಡೆಸಿರುವುದಾಗಿ ನುಡಿಯುತ್ತಾರೆ. ದಾವಾ ಆಸ್ತಿಯ ಪೂರ್ವ ದಿಕ್ಷಿಗೆ 5 ಪೂಟ್ ಸಾಮೂಹಿಕ ದಾರಿ ಇದೆ ಎಂದು ದಾಖಲೆ ಹಾಜರು ಪಡೆಸಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ತಂದೆ ದಾವಾ ಆಸ್ತಿಯನ್ನು ಖರೀದಿಸಿದ ನಂತರ ಮರಣ ಹೊಂದಿರುತ್ತಾರೆ. ಆತನ ಪತ್ನಿಯನ್ನು ಈ ದಾವೆಯಲ್ಲಿ ಪಾರ್ಟಿ ಮಾಡಿರುವುದಿಲ್ಲ ಎಂದರೆ ಸರಿ.

**3.** ದಾವಾ ಆಸ್ತಿಯ ಪೂರ್ವ ದಿಕ್ಕಿಗೆ ಮಹಮ್ಮದ್ ಶರೀಪ್ ರವರ ಮಳಿಗೆಗಳಿವೆ ಎಂದರೆ ಸರಿ. ಸದರಿ ಮಳಿಗೆಗಳ ನಂತರ ಪೂರ್ವ ದಿಕ್ಕಿಗೆ ಪ್ರತಿವಾದಿಗಳಿಗೆ ಸಂಬಂಧಿಸಿದ 2 ಮಳಿಗೆಗಳು ಇವೆ ಎಂದರೆ ಸರಿ. ಸದರಿ ಮಳಿಗೆಗಳು ಈಗಲೂ ಸಹ ಪ್ರತಿವಾದಿಯರ ತಾಯಿಯ ಹೆಸರಿನಲ್ಲಿವೆ ಎಂದರೆ ಸರಿ. ಸದರಿಯವರು ಅವಶ್ಯಕ ಪಕ್ಷಗಾರರು ಆಗಿದ್ದರು ಸಹ ಉದ್ದೇಶ ಪೂರ್ವಕವಾಗಿ ಈ ದಾವೆಯಲ್ಲಿ ಅವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾನು ಮೊದಲು ಭಾಡಿಗೆ ನಾತೆಯಿಂದ ಇದ್ದೇನು ಎಂದರೆ ಸರಿ. ನಂತರ ದಿನಾಂಕಃ 29.11.2012 ರಂದು ರಫಿಕ್ ರವರ ಜೊತೆ ನಿಪಿ-9 ರಂತೆ ನೊಂದಾಯಿತ ಖರೀದಿ ವಚನ ಪತ್ರ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಆ ಸಮಯದಲ್ಲಿ ಆತನ ಇಬ್ಬರೂ ಸಹೋದರರು ಜೀವಂತ ಇದ್ದರು ಎಂದರೆ ಸರಿ. ಸದರಿ ಖರೀದಿ ಪತ್ರಕ್ಕೆ ಅವರುಗಳ ಸಹಿ ಪಡೆದಿರುವುದಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿಗಳ ತಂದೆ ಸಹಿ ಮಾಡಿರುವುದಾಗಿ ನುಡಿ

ಯುತ್ತಾರೆ. ಮೊಹಮ್ಮದ ಶರೀಫ್ ಸಹಿ ಮಾಡಿರುವುದಿಲ್ಲ ಎಂದರೆ ಸರಿ.

4. ನಿಪಿ-9 ರಲ್ಲಿ ಪೂರ್ವದಿಕ್ಕಿನಲ್ಲಿ ಸಾಮೂಹಿಕ ದಾರಿ ಹಕ್ಕು ಇರುವ ಕುರಿತು ನಮೂದಿಸಿರುವುದಿಲ್ಲ ಎಂದರೆ ಸರಿ. ಖರೀದಿಯ ಸಮಯದಲ್ಲಿ ರಫಿಕ್ ಮರಣ ಹೊಂದಿರುತ್ತಾರೆ. ಆತನ ವಾರಸುದಾರರಿಂದ ಖರೀದಿ ಪತ್ರ ಬರೆಸಿಕೊಂಡಿರುತ್ತೇವೆ ಎಂದರೆ ಸರಿ. ಸದರಿ ಖರೀದಿ ಪತ್ರದಲ್ಲಿ ಪೂರ್ವ ದಿಕ್ಕಿಗೆ ಸಾಮೂಹಿಕ ದಾರಿ ಇರುವ ಕುರಿತು ನಮೂದಿಸಿರುವುದಿಲ್ಲ ಎಂದರೆ ಸರಿ. ಸದರಿ ಖರೀದಿ ಪತ್ರಕ್ಕೆ ಪ್ರತಿವಾದಿಗಳು ಮತ್ತು ಅವರ ತಾಯಿ ಹಾಗೂ ಮಹಮ್ಮದ್ ಶರೀಫ್ ಸಹಿ ಪಡೆದಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯ ಪೂರ್ವ ದಿಕ್ಕಿಗೆ ಸಾಮೂಹಿಕ ದಾರಿ ಇರುವ ಕುರಿತು ಖರೀದಿ ಪತ್ರದಲ್ಲಾಗಲಿ ಅಥವಾ ನನ್ನ ಮಾರಾಟಗಾರರ ನಡುವಿನ ಪಾಲು ವಾಟ್ನಿ ಪತ್ರದಲ್ಲಾಗಲಿ ನಮೂದಿಸಿರುವುದಿಲ್ಲ ಎಂದರೆ ಸರಿ.

5. ದಾವಾ ಸಾಮೂಹಿಕ ಆಸ್ತಿಯು ಪ್ರತಿವಾದಿಗಳು ತಮ್ಮ ಮನೆಗೆ ಒಡಾಡಲು ಬಿಟ್ಟುಕೊಂಡಿರುವ ದಾರಿ ಆಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಹೊಂದಿಕೊಂಡ ನಮ್ಮ ಮಾರಾಟಗಾರರ ಮಳಿಗೆಗಳನ್ನು ಪ್ರತಿವಾದಿಗಳೇ ಖರೀದಿಸಿರುತ್ತಾರೆ ಎಂದರೆ ಸರಿ. ದಾವಾ ಸಾಮೂಹಿಕ ರಸ್ತೆಯು ಪ್ರತಿವಾದಿಗಳ ಹಿಸ್ಸಾದ ಆಸ್ತಿಯಲ್ಲಿ ಇದೆ ಎಂದರೆ ಸರಿಯಲ್ಲ. ಸದರಿ ಆಸ್ತಿಯ ಸಾಮೂಹಿಕ ಆಸ್ತಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಸಾಮೂಹಿಕ ಆಸ್ತಿ ಅಲ್ಲದ ಕಾರಣ ಖರೀದಿ ಪತ್ರದಲ್ಲಿ ಮತ್ತು ಪಾಲು ವಾಟ್ನಿ ಪತ್ರದಲ್ಲಿ ತೋರಿಸಿರುವುದಿಲ್ಲ ಎಂದರೆ ಸಾಕ್ಷಿಯು ಪಾಲು ವಾಟ್ನಿ ಪತ್ರದಲ್ಲಿ ತೋರಿಸಿರುವುದಾಗಿ ನುಡಿಯುತ್ತಾರೆ. ಸದರಿ ಪಾಲು ವಾಟ್ನಿಯ ಸಮಯದಲ್ಲಿ ಪ್ರತಿವಾದಿಗಳ ತಂದೆ ಮತ್ತು ಆತನ ಸಹೋದರರ ನಡುವೆ ಮೌಖಿಕ ಒಪ್ಪಂದವಾಗಿತ್ತು ಎಂದರೆ ಸರಿ. ಸದರಿ ಒಪ್ಪಂದದಂತೆ ಪಾಲು ವಾಟ್ನಿಯ ಆಸ್ತಿಗಳನ್ನು ಮಾರಾಟ ಮಾಡುವ ಸಂದರ್ಭ ಬಂದರೆ ತಮ್ಮಲ್ಲಿಯೆ ಮಾರಾಟ ಮಾಡಬೇಕು ಎಂದು ಒಪ್ಪಿಕೊಳ್ಳಲಾಗಿತ್ತು ಎಂದರೆ ಸರಿಯಲ್ಲ.

6. ಸದರಿ ಮೌಖಿಕ ಒಪ್ಪಂದದಂತೆ ಮಹಮ್ಮದ ಶರೀಫ್ ರವರು ಪ್ರತಿವಾದಿಗಳಿಗೆ ತನ್ನ ಮಳಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-9 ರ ಕರಾರು ಪತ್ರ ನನ್ನ ಮತ್ತು ರಫಿಕ್ ವಾರಸುದಾರರ ನಡುವೆ ಮಾತ್ರ ಆಗಿರುತ್ತದೆ ಎಂದರೆ ಸರಿ. ದಾವಾ ಸಾಮೂಹಿಕ ರಸ್ತೆ ಇಲ್ಲದಿದ್ದರೂ ಸಹ ಪ್ರತಿವಾದಿಗಳು ತೊಂದರೆ ನೀಡುತ್ತಿದ್ದಾರೆ ಎಂದು ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಸ
ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು.

ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.